ಜೆ.ಆರ್. ಆದಿನಾರಾಯಣಮುನಿ ಬೆಂಗಳೂರು

ಮಾನವ–ಪ್ರಾಣಿಗಳ ನಡುವೆ ಸುಳಿದಾಡುವ ಆತ್ಮ ಗಂಡೋ ಹೆಣ್ಣೋ?




ಮೇಕಪ್ ಇಲ್ಲದೆ ಅಲೆದಾಡುವುದರಿಂದ ಗಂಡೇ ಅಂತೆ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ಶತ್ರು ಮಿತ್ರನಾಗುವುದು ಯಾವಾಗ ಸರ್?

ದಬ್ಬುವುದಕ್ಕಿಂತ ತಬ್ಬುವುದೇ ಲಾಭದಾಯಕ ಎಂದು ತಿಳಿದಾಗ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಭಕ್ತಿಗೂ ಮುಕ್ತಿಗೂ ಎಷ್ಟು ದೂರ?

ಭಕ್ತಿಯ ಮುಕ್ತಿಗಂತೂ ಒಂದೇ ಡ್ಯಾನ್ಸ್ ಸಾಕು ಎಂದಳಂತೆ ಊರ್ವಶಿ.

ಅಮರಯ್ಯಾ ಪತ್ರಿಮಠ, ಸುರಪುರ

ನುಂಗಲಾರದ ತುತ್ತು ಯಾವುದು?

ಸುಂದರ ಘಟವಾಣಿ.

ಟಿ.ಎಂ. ಮಾನಪ್ಪ, ಶಿವಮೊಗ್ಗ

ಹಲ್ಲು ಉಜ್ಜುವುದಕ್ಕೂ, ಪಾತ್ರೆ ಉಜ್ಜುವುದಕ್ಕೂ ವ್ಯತ್ಯಾಸವೇನು?




ಹಲ್ಲು ಉಜ್ಜಲು ಕೆಲಸದವರು ಸಿಕ್ಕುವುದಿಲ್ಲ.

ಕಾವ್ಯಶ್ರೀ ಪತ್ರಿಮಠ, ಶೋರಾಪುರ

ಹಸ್ತರೇಖೆಯನ್ನು ನಂಬಬೇಕೋ ಹಣೆಬರಹವನ್ನು ನಂಬಬೇಕೋ?

ಓದುಬರಹವನ್ನು ನಂಬಿದರೆ ಇವೆರಡನ್ನೂ ತಿದ್ದಿಕೊಳ್ಳಬಹುದು.

ಚನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ

ಬಯಸಿದ್ದು ಬಿಟ್ಟು ಬೇರೆಯೇ ಸಿಗುತ್ತದೆಯಲ್ಲಾ?

ಬಯಸಲೇಬೇಡಿ. ಆಗ ಸಿಕ್ಕಿದ್ದೆಲ್ಲ ತೃಪ್ತಿಕರವೇ.

ಬಿ. ಚಂದ್ರೇಗೌಡ, ಬೆಂಗಳೂರು

ಚುನಾವಣೆಯಲ್ಲಿ ಗೆದ್ದಾಗ ಸಂಭ್ರಮಿಸುವುದಕ್ಕೂ ಮದುವೆಯಾದಾಗ ಸಂಭ್ರಮಿಸುವುದಕ್ಕೂ ಏನು ವ್ಯತ್ಯಾಸ?

ಚುನಾವಣೆಯ ಗೆಲುವಿನ ಸಂಭ್ರಮ ಐದು ವರ್ಷವಾದರೂ ಇರುತ್ತದೆ.

ಶ್ರುತಿ ರಿಗ್ರೆಟ್ ಐಯ್ಯರ, ಬೆಂಗಳೂರು

ಇಂದು ಗಾಂಧೀಜಿ, ನೆಹರೂ, ಜಿನ್ನಾ ಬದುಕಿದ್ದರೆ ಏನಾಗುತ್ತಿತ್ತು?

ಮೂವರಿಗೂ ಗ್ಲೂಕೋಸು, ಸ್ಟೈರ್ರು ಬೇಕಾಗುತ್ತಿತ್ತು.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

ರಾಜಕೀಯದ ಬೀಸೋ ಕಲ್ಲಿನಲ್ಲಿ ಪಕ್ಷಗಳನ್ನು ಹಾಕಿ ಬೀಸಿದರೆ ಏನು ಬರುತ್ತೆ?

ಸಮ್ಮಿಶ್ರದ ದುರ್ವಾಸನೆ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

ಅಕ್ಕತಂಗಿಯರ ಮದುವೆ ಮಾಡಿ ಗಂಡನ ಮನೆಗೆ ಕಳುಹಿಸಿದ ನಂತರ ಅಣ್ಣತಮ್ಮ ಮದುವೆಯಾಗಲು ಕಾರಣ?

ರೈಲ್ವೆ ನಿಯಮ. ಒಂದು ಲೈನ್ ಕ್ಲಿಯರ್ ಆದ ಮೇಲೆಯೇ ಮತ್ತೊಂದು ರೈಲಿನ ಪ್ರವೇಶಕ್ಕೆ ಅವಕಾಶ.

ಎಸ್ಸೆನ್ ಮಹಾಬಲರಾವ್, ಎನ್ನರ್ಪುರ

ಊರಾಚೆ ಇರುವ ಕಂದಕವನ್ನು ಮುಚ್ಚಿಲ್ಲವಲ್ಲಾ...?

ಜನರಲ್ಲಿ ವಿಶ್ವಾಸವಿಡಿ. ಶೀಘ್ರವೇ ಪ್ಲಾಸ್ಟಿಕ್ ವಸ್ತುಗಳಿಂದ ತುಂಬುತ್ತಾರೆ.

ಪಿ. ಶಂಕರಪ್ಪ, ಶಿವಮೊಗ್ಗ

ಕೊರೊನಾ ಅಲೆಗಳು ನಮ್ಮ ದೇಶವನ್ನು ಎಂದು ಬಿಟ್ಟುಹೋಗುತ್ತವೆ?

ಎಲ್ಲ ಹೊಣೆಗೇಡಿಗಳು ದೇಶದಿಂದ ತೊಲಗಿದ ಮರುದಿನವೇ.

ಎನ್.ವಿ. ಶ್ರೀನಿವಾಸ್, ಮೈಸೂರು

ಕಾಲಚಕ್ರ ತಿರುಗುವಾಗ ಮೇಲಿದ್ದವರು ಕೆಳಗೆ, ಕೆಳಗಿದ್ದವರು ಮೇಲೆ ಹೋಗುವರಂತೆ. ಕೆಳಗಿನವರು ಸಿಕ್ಕಾಪಟ್ಟೆ ದಪ್ಪಗಿದ್ದರೆ?

ಇದ್ದಲ್ಲೇ ಗಿರಗಿರ ತಿರುಗಿಸಿ ಸೊರಗಿಸಿ ಮೇಲೆ ಕಳಿಸುವರಂತೆ.

## ವಾರದ ಪ್ರಶ್ನೆ

ಕೆ. ಗೋವಿಂದಾಚಾರಿ, ಮೈಸೂರು

ಚಿಕ್ಕ ತುಳಸಿಗಿಡವನ್ನು ಪೂಜಿಸುವವರು ಫಲ ಕೊಡುವ ಮಾವು ಹಲಸಿನ ಮರಗಳನ್ನೇಕೆ ಪೂಜಿಸುವುದಿಲ್ಲ?

ಔಷಧೀಯ ಗುಣವಿದೆಯಲ್ಲ. ಗುಳಿಗೆಗೆ ಸಿಗೋ ಮರ್ಯಾದೆ ಗುಳ್ಳಾಪಟೆಗೆ ಸಿಗಲ್ಲ.

ಉಮೇಶ್ ದೈವಜ್ಞ, ಊರಿಲ್ಲ

ಸತ್ಯವನ್ನು ಎಷ್ಟು ಮಾತನಾಡಬೇಕು?

ಆಸ್ಪತ್ರೆಯಲ್ಲಿ ಪೂರ್ತಿ; ವಕೀಲರೊಡನೆ ಅರ್ಧ; ಮಿಕ್ಕೆಡೆಗಳಲ್ಲಿ ಸ್ಥಿತಿಗೆ ತಕ್ಕಷ್ಟು.

ವಿ. ಹಮೀದ್, ವಿಟ್ಲ

ಪ್ರೀತಿಯ ಅರ್ಥ ಗೊತ್ತಿಲ್ಲದಾಕೆಯನ್ನು ಪ್ರೀತಿಸಿದರೆ ಏನಾಗಬಹುದು?

ನೀವೇ ಅವಳ ಲವ್ ಗುರು ಆಗಬಹುದು.

ಹೆಚ್.ಎಸ್. ಶಿವಪ್ರಕಾಶ್, ಬೆಂಗಳೂರು

ಮೊದಲು ಬಂದದ್ದು ಯಾವುದು – ಕನ್ನಡ ಟೀವಿ ಸೀರಿಯಲ್ಲೋ ಚ್ಯೂಯಿಂಗ್ ಗಮ್ಮೋ?




ಮೊದಲು ಬಂದದ್ದು ಗಮ್ಮೇ. ಸೀರಿಯಲ್ಲು ಅದರ ಎಳೆದೆಳೆದೆಳೆದೆಳೆದ ವರ್ಷನ್ನು.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

ಮಾತೃಭಾಷೆ ಇದೆ. ಪಿತೃಭಾಷೆ ಏಕಿಲ್ಲ?

ಇದೆ. 'ಆಗಲಿ, 'ನೀನ್ಹೇಳ್ದಹಾಗೇ' 'ತಪ್ಪಾಯ್ತು' 'ಕೊಡಿಸ್ತೀನಿ' ಇವೆಲ್ಲ ಪಿತೃಭಾಷೆಯ ಪದಗಳೇ.

ರಮೇಶ್, ಹನುಮನಾಳು

ಇಲ್ಲೊಬ್ಬಳು 'ನೀವು ಟೀವಿಯಲ್ಲಿ ಧಾರಾವಾಹಿ ನೋಡೋಲ್ವಾ' ಅನ್ನುತ್ತಾಳೇಕೆ?

ನಿಮ್ಮ ನಗೆಮುಖ ಕಂಡು ಅವಳಿಗೆ ಅನುಮಾನ ಬಂದಿರಬೇಕು.

■ ರಾಮ್

ಪ್ರಶ್ನೆ ಕಳಿಸಲು: editorsu@sudha.co.in